# ಪ್ಲಾಸ್ಟಿಕ್ ಸ್ನೇಹಿತರು



■ ಸಯ್ಯದ್ ಯೇಜಸ್ ಪಾಷ,
ಬೆಂಗಳೂರು

ದೂರದ ಊರಿನಿಂದ ದಣಿದ ಚಿಟ್ಟೆಯೊಂದು ತನ್ನ ರೆಕ್ಕೆ ಬಡಿಯುತ್ತ, ಹಾರುತ್ತ ಪುಟ್ಟನ ಮನೆಯ ಒಳಗೆ ಪ್ರವೇಶಿಸಿತು. ಪುಟ್ಟನ ಮನೆಯ ಗೋಡೆಯ ಮೇಲೆ ತೂಗು ಹಾಕಿದ್ದ ಮಹಾತ್ಮ ಗಾಂಧಿಯವರ ಭಾವಚಿತ್ರಕ್ಕೆ ಹೂ ಮಾಲೆಯಾಗಿ ಹಾಕಿದ್ದ , ಬಣ್ಣ ಬಣ್ಣದ ಪ್ಲಾಸ್ಟಿಕ್ ಹೂವುಗಳ ಮೇಲೆ ಕುಳಿತುಕೊಂಡಿತು. ನೆನ್ನೆ ದಿನ ಶಾಲೆಯಲ್ಲಿ 'ಓ ಚಿಟ್ಟೆ ಬಣ್ಣದ ಚಿಟ್ಟೆ' ಪದ್ಯ ಕೇಳಿದ ಪುಟ್ಟನ ಗಮನ ಸಹಜವಾಗಿ ಮನೆಯೊಳಗೆ ಅನಿರೀಕ್ಷಿತವಾಗಿ ಕರೆಯದೆ ಅತಿಥಿಯಾಗಿ ಬಂದ ಚಿಟ್ಟೆಯ ಕಡೆ ಹೊರಳಿತು. ಚಿಟ್ಟೆ ಹೂವಿನ ಮಾಲೆಯ ಮೇಲೆ ಒಂದು ಕಡೆ ಕುಳಿತುಕೊಳ್ಳಲಾರದೆ ಅತ್ತಿಂದಿತ್ತ ಹಾರುವುದನ್ನು, ಗಮನಿಸಿದ. ಆ ಚಿಟ್ಟೆಯ ಹುಚ್ಚಾಟ ಕಂಡವನಂತೆ ಜೋರಾಗಿ ನಗುತ್ತಿದ್ದನು.

ಪುಟ್ಟನ ನಗುವನ್ನು ಕಂಡ ಅವರ ತಂದೆ ಪುಟ್ಟ 'ಏಕೆ ಹೀಗೆ ನಗುತ್ತಿರುವೆ ಕಾರಣವೇನು?' ಎಂದು ಕೇಳಿದರು. ಅದಕ್ಕೆ ಪುಟ್ಟ 'ಅಪ್ಪ ಅಪ್ಪ ಈ ಚಿಟ್ಟೆಗೆ ಬುದ್ಧಿನೇ ಇಲ್ಲ ನೋಡಪ್ಪ, ಹೋಗಿ ಹೋಗಿ ಪ್ಲಾಸ್ಟಿಕ್ ಹೂವುಗಳ ಮೇಲೆ ಕುಳಿತುಕೊಂಡು ಆಹಾರ ಹುಡುಕುತ್ತಿದೆ. ಪ್ಲಾಸ್ಟಿಕ್ ಹೂವುಗಳಲ್ಲಿ ಏನಪ್ಪ? ಸಿಗುವುದು ಅದಕ್ಕೇ ಅದನ್ನು ನೋಡಿ ನನಗೆ ನಗು ಬಂತು' ಎಂದು ಹೇಳಿದನು. ಪುಟ್ಟನ ಮಾತುಗಳನ್ನು ಕೇಳಿದ ಪುಟ್ಟನ ತಂದೆ, ಪುಟ್ಟನನ್ನು ಹಾಗೇ ನೋಡುತ್ತ ಏನೋ ಮನದಲ್ಲಿ ಯೋಚನೆ ಮಾಡಿದವರಂತೆ, ಅಡುಗೆ ಮನೆಯೊಳಗೆ ಹೋಗಿ ಐದು ನಿಮಿಷ ಬಿಟ್ಟು ಪುಟ್ಟನ ಬಳಿ ಬಂದರ . ಅಡುಗೆ ಮನೆಯೊಳಗಿಂದ ಒಂದು ಲೋಟದ ತುಂಬ ಹಾಲು ತಂದು ಪುಟ್ಟನ ಮುಂದಿಟ್ಟರು. ಲೋಟ ಇಟ್ಟ ತಕ್ಷಣವೇ ಪುಟ್ಟ ತನ್ನ ಎರಡು ಕೈಗಳಿಂದ ಲೋಟವನ್ನು ಗಬಕ್ಕನೆ ತೆಗೆದುಕೊಂಡು ಹಾಲು ಕುಡಿಯಲು ಮುಂದಾದ. ಪುಟ್ಟನನ್ನು ತಡೆದ ಅವರಪ್ಪ 'ಪುಟ್ಟು ಮರಿ ಒಂದು ನಿಮಿಷ ತಡೆದುಕೋ ನಾನು ನಿನಗೆ ಕೊಟ್ಟ ಹಾಲನ್ನು ಸ್ವಲ್ಪ ಎಚ್ಚರದಿಂದ ನೋಡು' ಎಂದರು. ಪುಟ್ಟ ಅವರು ಹೇಳಿದ ಮಾತಿಗೆ ಪೆಚ್ಚಾಗಿ, ಮೆಲ್ಲನೇ ಲೋಟವನ್ನು ಅವನ ಮೂಗಿನ ಬಳಿ ತಂದು ಮೂಸಿ ನೋಡಿದ. ಹಾಲಿನ ಯಾವದೇ ಪರಿಮಳ ಬರಲಿಲ್ಲ. ಆದರು ಪುಟ್ಟನಿಗೆ ಒಂದು ರೀತಿಯ ಆಶ್ಚರ್ಯ ಇದು ಹಾಲಿನ ಹಾಗೆಯೇ ಇದೆಯಲ್ಲ! ಎಂದು, ಕೊನೆಗೆ ಇದು ಹಾಲಲ್ಲ ಎಂದು ತಿಳಿದಾಗ. 'ಅಪ್ಪ ಇದು ಹಾಲಲ್ಲ' ಎಂದು ಅವರಪ್ಪನಿಗೆ ಗಟ್ಟಿಯಾಗಿ ಹೇಳಿದನು.

'ಹಾಲಿನ ಹಾಗೇ ಬೆಳ್ಳಗೆ ಇದೆಯಲ್ಲಪ್ಪ, ಹಾಗಾದರೇ ಇದು ಏನು?' ಎಂದು ಆಶರ್ಯಚಕಿತನಾಗಿ ಕೇಳಿದನು. ಅದಕ್ಕೆ ಪುಟ್ಟುವಿನ ತಂದೆ 'ಮಗೂ ಈ ಲೋಟದಲ್ಲಿರುವುದನ್ನು ಸೂಕ್ಷ್ಮವಾಗಿ ನೋಡು, ಇದು ಹಾಲಿನ ಬಣ್ಣದ ಹಾಗೇ ಇರುವ ಸುಣ್ಣದ ನೀರು ನಿನಗೆ ಇದು ಗೊತ್ತಾಗಲಿಲ್ಲ ಅಲ್ಲವೇ?' ಎಂದು ಕೇಳಿದರು. 'ಹೌದಪ್ಪ, ನನಗೆ ಗೊತ್ತಾಗಲಿಲ್ಲ' ಎಂದ